# ನ್ಯಾಯಮೂರ್ತಿ ಕೆ.ಎಲ್.ಮಂಜುನಾಥ್



ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ಲಕ್ಷ್ಮಯ್ಯನವರ ಎರಡನೆಯ ಮಗನಾಗಿ ದಿನಾಂಕ: 21-4-1953ರಲ್ಲಿ ಕಾಂತರಾಜಪುರದಲ್ಲಿ ಜನಿಸಿದ ಇವರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಮುಗಿಸಿದರು. ತಮ್ಮ ಹಿರಿಯ ಸಹೋದರರಾದ ದಿ: ಡಾ॥ ಭೋಜೇಗೌಡರು ಹಾಕಿಕೊಟ್ಟ ಹಾದಿಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ರಾಜ್ಯದ ಹಲವಾರು ಸ್ಥಳಗಳಲ್ಲಿ ಮುಂದುವರೆಸಿ, ತಮ್ಮ ಹದಿನೆಂಟನೇ ವಯಸ್ಸಿಗೆ ಬಿ.ಎಸ್ಸಿ. ಪದವಿಯನ್ನು ಭುವನೇಂದ್ರ ಕಾಲೇಜು, ಕಾರ್ಕಳದಲ್ಲೂ, ಎಲ್.ಎಲ್.ಬಿ.(ಕಾನೂನು) ಪದವಿಯನ್ನು ಬೆಂಗಳೂರಿನ ಸರ್ಕಾರಿ ಕಾನೂನು ಮಹಾವಿದ್ಯಾಲಯದಲ್ಲೂ 1974 ರಲ್ಲಿ ಮುಗಿಸಿದರು.

ಅತ್ಯಂತ ಕಿರಿಯ ವಯಸ್ಸಿನಲ್ಲಿ ಅಂದರೆ ತಮ್ಮ 21ನೇ ವಯಸ್ಸಿಗೆ ವಕೀಲ ವೃತ್ತಿಯನ್ನು ಬೆಂಗಳೂರಿನಲ್ಲಿ ಆರಂಭಿಸಿ, ಹಿರಿಯ ವಕೀಲರಾದ ಶ್ರೀ ಶೇಖರ ಶೆಟ್ಟಿಯವರ ಕೈ ಕೆಳಗೆ ವಕೀಲಿ ವೃತ್ತಿಯ ಅನುಭವ ಪಡೆದು ಎರಡೇ ವರ್ಷದಲ್ಲಿ ತಮ್ಮ ಸ್ವಂತ ಕಚೇರಿಯನ್ನು ಸ್ಥಾಪಿಸಿ ಕೆಲವೇ ವರ್ಷಗಳಲ್ಲಿ ವಕೀಲಿ ವೃತ್ತಿಯ ಉನ್ನತ ಶಿಖರಕ್ಕೆ ಬೆಳೆದು ಹಲವಾರು ಕಿರಿಯ ವಕೀಲರುಗಳಿಗೆ ಮಾರ್ಗದರ್ಶನ ನೀಡಿರುತ್ತಾರೆ. ತಮ್ಮ ವಕೀಲ ವೃತ್ತಿಯಲ್ಲಿ ಅತೀ ಕೆಳಗಿನ ನ್ಯಾಯಾಲಯದಿಂದ ಹಿಡಿದು ಬಾರತದ ಸರ್ವೋಚ್ಚ ನ್ಯಾಯಾಲಯದವರೆಗೂ ವ್ಯಾಜ್ಯಗಳನ್ನು ನಡೆಸಿದ ಕೀರ್ತಿ ಇವರದು. ಬೆಂಗಳೂರಿನ ವಕೀಲರ ಪರಿಷತ್ತಿನ ಸದಸ್ಯರಾಗಿ (1994-1999) ಸೇವೆ ಸಲ್ಲಿಸಿದ್ದಾರೆ.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ, ಇವರು ವಕೀಲ ವೃತ್ತಿಯಲ್ಲಿ ಎಲ್ಲಾ ತರಹದ ವ್ಯಾಜ್ಯಗಳನ್ನು
ನಡೆಸಿದ್ದಾರೆ. ಇವರು 1983ರಲ್ಲಿ ಕೆ.ಜಿ.ಎಫ್ ನಲ್ಲಿ ಗೋಲಿಬಾರ್ ನಡೆದಾಗ ಶ್ರೀ ಬಾಲಸುಬ್ರಹ್ಮಣ್ಯಂ, ಕಮಿಷನ್ ಆಫ್ ಎನ್ಕ್ವಯರಿಯಲ್ಲಿ, ಕಮಿಷನ್ ಪರ ವಕೀಲರಾಗಿ ಕನ್ನಡ ಸಾಹಿತ್ಯ ಪರಿಷತ್ ಹಗರಣದಲ್ಲಿ ನ್ಯಾಯಮೂರ್ತಿ ಪಿ.ಕೆ.ಶ್ಯಾಮಸುಂದರ್ ಕಮಿಷನ್‌ನಲ್ಲಿ ಕನ್ನಡಿಗರ ಪರವಾಗಿ ಹಿರಿಯ ಸಾಹಿಗಳ ಪರ ವಕಾಲತ್ತನ್ನು ವಹಿಸಿದ್ದರು. 1987ರಲ್ಲಿ ಗುಲ್ಬರ್ಗಾ ಜಿಲ್ಲೆಯ ಗುರುಮಿಟ್‌ಕಲ್‌ನಲ್ಲಿ ನಡೆದ ಬೆತ್ತಲೆ ಮೆರವಣಿಗೆಯ ಪ್ರಕರಣದಲ್ಲಿ ನ್ಯಾಯಮೂರ್ತಿ ವಿಶ್ವನಾಥ್ ಕಮಿಷನ್ ಮುಂದೆ ಪೋಲೀಸಿನವರ ಪರವಾಗಿ ಹೋರಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ವೈದ್ಯ ವಿದ್ಯಾರ್ಥಿಗಳ ಗ್ರೇಸ್ ಮಾರ್ಕ್ಸ್ ಹಗರಣದಲ್ಲಿ ನ್ಯಾಯಮೂರ್ತಿ ಬಾಲಕೃಷ್ಣ ಕಮಿಷನ್‌ನಲ್ಲಿ ಎಲ್ಲಾ ಕನ್ನಡಪರ ಸಂಘಟನೆಗಳ ಪರವಾಗಿ ಹೋರಾಡಿದ ಕೀರ್ತಿ ಇವರದು.

ಅದೇ ರೀತಿ ಬೆಂಗಳೂರಿನ ವಕೀಲರ ಸಹಕಾರಿ ಸಂಘದ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ನ್ಯಾಯಮಿತ್ರ ಸಹಕಾರಿ ಬ್ಯಾಂಕಿನ ಪ್ರಮೋಟರಾಗಿ, ಹಲವಾರು ವಿದ್ಯಾಸಂಸ್ಥೆಗಳು ಹಾಗೂ ದೇವಸ್ಥಾನಗಳ ಧರ್ಮದರ್ಶಿಯಾಗಿ ಕೆಲಸ ಮಾಡಿದ್ದಾರೆ.

ಇವರು ವಕೀಲರಾಗಿ ಈ ಕೆಳಗಿನ ಸಂಸ್ಥೆಗಳಿಗಾಗಿ ದುಡಿದಿದ್ದಾರೆ:

1. ಬೆಂಗಳೂರು ಮಹಾನಗರ ಪಾಲಿಕೆ
2. ಮಂಗಳೂರು ಮಹಾನಗರ ಪಾಲಿಕೆ
3. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
4. ಕರ್ನಾಟಕ ರಾಜ್ಯ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ (ಸಿ.ಇ.ಟಿ. ಸೆಲ್)
5. ಕರ್ನಾಟಕ ಗೃಹ ನಿರ್ಮಾಣ ಮಂಡಳಿ
6. ರೆಡ್ ಕ್ರಾಸ್ ಸಂಸ್ಥೆ (ಕರ್ನಾಟಕ ಘಟಕ)
7. ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್
8. ಹಾಸನ ನಗರಾಭಿವೃದ್ಧಿ ಪ್ರಾಧಿಕಾರ
9. ಹಾಸನದ ಪುರಸಭೆ
10. ಮಂಡ್ಯ ಪುರಸಭೆ
11. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್
12. ಕಾರ್ಪೋರೇಷನ್ ಬ್ಯಾಂಕ್

-ಇನ್ನೂ ಹಲವಾರು ಸಕ್ಕರೆ ಕಾರ್ಖಾನೆಗಳು, ಸಹಕಾರಿ ಸಂಘಗಳಿಗೆ ಕಾನೂನು ಸಲಹೆಗಾರರಾಗಿದ್ದರು.

ಇವರ ಸೇವೆಯನ್ನು ಗುರುತಿಸಿ ಹೈಕೋರ್ಟಿನ ಹಾಗೂ ಸುಪ್ರೀಮ್ ಕೋರ್ಟಿನ ಶಿಫಾರಿಸಿನ ಮೇರೆಗೆ ಭಾರತದ ಅಂದಿನ ರಾಷ್ಟ್ರಪತಿಗಳು ದಿನಾಂಕ: 11-12-2000ರಂದು ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಿದರು. ಹೈಕೋರ್ಟಿನಲ್ಲಿ ನ್ಯಾಯಮೂರ್ತಿಯಲ್ಲದೆ 2004ರಿಂದ ಉಚ್ಚನ್ಯಾಯಾಲಯದ ಕಾನೂನು ಸೇವಾಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸುತ್ತಿರುತ್ತಾರೆ.

ಇವರ ಶ್ರೀಮತಿಯವರಾದ ಪುಷ್ಪಲತರವರು ಪ್ರಗತಿಪರ ರೈತ ಮಹಿಳೆಯಾದರೆ, ಇವರ ಮಗಳು ಕೆ.ಎಂ.ಚೈತ್ರರವರು ಬೆಂಗಳೂರಿನ ಎಂ.ಎಸ್.ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಪದವಿ ವ್ಯಾಸಂಗ ಮಾಡಿ ವೈದ್ಯರಾಗಿದ್ದಾರೆ. ಇವರ ಮಗ ಕೆ.ಎಂ.ದರ್ಪಣ್‌ರವರು ಬೆಂಗಳೂರಿನಲ್ಲಿ ಕಾನೂನು ಪದವಿಯನ್ನು ವ್ಯಾಸಂಗ ಮಾಡುತ್ತಿದ್ದಾರೆ.